ಪ್ರಬಂಧ

# ಅಡ್ಡಯೋಚನೆ



**ಎಚ್. ಡುಂಡಿರಾಜ್**

ಕಲೆ: ಗುಜ್ಜಾರ್

ಬ್ಯಾಂಕ್ ಶಾಖೆಗಳ ಸಾಧನೆಯ ವಿಮರ್ಶೆಗಾಗಿ ನಡೆಯುವ ಸಮಾವೇಶಗಳಲ್ಲಿ ಎಷ್ಟೇ ಪ್ರಯತ್ನ ಮಾಡಿದರೂ ಶಾಖೆಯ ವ್ಯವಹಾರ ಹೆಚ್ಚಾಗುತ್ತಿಲ್ಲ, ಗೋಲು ಮುಟ್ಟಲು ಸಾಧ್ಯವಾಗುತ್ತಿಲ್ಲ ಎಂದು ಕೆಲವು ಶಾಖಾ ವ್ಯವಸ್ಥಾಪಕರು ಗೋಳು ತೋಡಿಕೊಳ್ಳುವುದು ಸಾಮಾನ್ಯ. ಆಗ ಮೇಲಧಿಕಾರಿಗಳು ನೀಡುವ ಸಲಹೆ, 'ಹೊಸ ರೀತಿಯಲ್ಲಿ ಯೋಚನೆ ಮಾಡಬೇಕ್ರಿ. Out of the box thinking ಅಂತಾರಲ್ಲ, ಅದನ್ನು ಮಾಡಿದ್ರೆ ನಿಮ್ಮ ಸಮಸ್ಯೆಗೆ ಪರಿಹಾರ ಸಿಕ್ಕೇ ಸಿಗುತ್ತೆ.' Out of the box thinking ಎನ್ನುವುದಕ್ಕೆ 'ಪೆಟ್ಟಿಗೆಯ ಹೊರಗಿನ ಯೋಚನೆ' ಎಂದರೆ ಕೆಟ್ಟ ಗೂಗಲ್ ಅನುವಾದ ಆಗುತ್ತದೆ. ಕನ್ನಡದಲ್ಲಿ 'ಊರಿಗೆಲ್ಲ ಒಂದು ದಾರಿಯಾದರೆ ಪೋರನಿಗೆ ಇನ್ನೊಂದು ದಾರಿ' ಎಂಬ ನಾಣ್ನುಡಿ ಇದೆ. ಅದೊಂದು ಬೈಗುಳದಂತೆ ಬಳಸಲ್ಪಡುತ್ತದೆ. Out of the box thinking ಅಂದರೆ ಹೆಚ್ಚು ಕಡಿಮೆ ಅದೇ. ಅದು ಸಮಸ್ಯೆಗೆ ಪರಿಹಾರ ಹುಡುಕುವ ಒಂದು ಸೃಜನಶೀಲ ವಿಧಾನ. ಅದಕ್ಕೆ ಅಡ್ಡ ಯೋಚನೆ ಅಥವಾ ವಕ್ರ ಚಿಂತನೆ ಅನ್ನಬಹುದು.

ಉದ್ಯಮಿಗಳು ವ್ಯವಹಾರವನ್ನು ಹೆಚ್ಚಿಸಲು, ಸ್ಪರ್ಧೆಯನ್ನು ಎದುರಿಸಲು, ಸಾಂಪ್ರದಾಯಿಕ ಮಾರ್ಗಗಳು ವಿಫಲವಾದಾಗ ಸಮಸ್ಯೆಯ ಎಲ್ಲ ಮಗ್ಗುಲುಗಳನ್ನು ಪರಿಶೀಲಿಸಿ, ವಿಭಿನ್ನವಾಗಿ ಯೋಚಿಸಿ, ಹೊಸ ದಾರಿಗಳನ್ನು ಹುಡುಕುತ್ತಾರೆ. ಹೊಸ ಉತ್ಪನ್ನಗಳ ಬಿಡುಗಡೆ, ಹಳೆಯದರ ಪರಿಷ್ಕಾರ, ಉತ್ಪನ್ನಗಳಿಗೆ ಹೊಸ ನಾಮಕರಣ, ಹೊಸ ಮಾರಾಟ ಯೋಜನೆಗಳು ಇತ್ಯಾದಿಗಳೆಲ್ಲ Out of the box thinkingನ ಫಲ. ವಿಜ್ಞಾನ ರಂಗದಲ್ಲಿ ಕಾಲಕಾಲಕ್ಕೆ ಆಗುತ್ತಿರುವ ಹೊಸ ಆವಿಷ್ಕಾರಗಳ ಹಿಂದೆಯೂ Out of the box thinking ಇರುತ್ತದೆ. ಇದೊಂದು ಸೃಜನಶೀಲ ಪ್ರಕ್ರಿಯೆಯಾದ್ದರಿಂದ ಸಾಹಿತ್ಯದಲ್ಲಿಯೂ ಇದನ್ನು ಕಾಣಬಹುದು. ಸಾಹಿತ್ಯದಲ್ಲಿ ಅಡ್ಡ ಯೋಚನೆಯ ಉದ್ದೇಶ ಓದುಗರಿಗೆ ಅನಿರೀಕ್ಷಿತ ಆನಂದವನ್ನು ನೀಡುವುದು. ಈ ಪ್ರಬಂಧದ ವಿಷಯ Out of the box thinking ಅಥವಾ ಅಡ್ಡ ಯೋಚನೆ.

ಅಡ್ಡಯೋಚನೆಗೆ ಅಡ್ಡಿಯಾಗದಿರಲಿ ಎಂದು ವಿಘ್ನರಾಜನಾದ ಗಣಪತಿಯಿಂದಲೇ ಆರಂಭಿಸೋಣ. ತನ್ನನ್ನು ನೋಡಿ ನಕ್ಕ ಚಂದ್ರನಿಗೆ ಹೊಡೆಯುವುದಕ್ಕೆ ತನ್ನ ಹಲ್ಲನ್ನೇ ಕಿತ್ತುಕೊಂಡು ಏಕದಂತನಾದ ಆತನ ಕಥೆ ಯಾರಿಗೆ ಗೊತ್ತಿಲ್ಲ? ಅದನ್ನು ಕೇಳಿದಾಗಲೆಲ್ಲ ಬುದ್ಧಿವಂತನಾದ ಗಣಪ ಏಕೆ ಇಂತಹ ದಡ್ಡ ಕೆಲಸ ಮಾಡಿದ? ಎಂಬ ಪ್ರಶ್ನೆ ನನ್ನನ್ನು ಕಾಡುತ್ತಿತ್ತು. ಈ ಕುರಿತು ಅಡ್ಡ ಯೋಚನೆ ಮಾಡಿದಾಗ ಹೊಳೆದ ಕಾರಣ ಈ ಹನಿಗವನದಲ್ಲಿದೆ:

**ಏಕದಂತ**
**ಏಕೆ ತನ್ನ ದಂತ**
**ತಾನೇ ಕಿತ್ತ?**
**ಏಕೆಂದರೆ ಅದು ಆನೆದಂತ**
**ಸ್ವಂತದ್ದಲ್ಲ**
**ಆನೆದೂ ಅಂತ!**

ವಕ್ರತುಂಡ ಈಗಲೂ ವಕ್ರದಂಷ್ಟ್ರನಾಗಿ ಉಳಿಯಲು ಕಾರಣವೇನೆಂದು ವಕ್ರದೃಷ್ಟಿಯಿಂದ ಯೋಚಿಸಿದಾಗ